ಅಗೆದಷ್ಟೂ ನಕ್ಷತ್ರ
ಲೇ: ಸುಮಂಗಲಾ
(ಕಾದಂಬರಿ)
ಪು:192 ಬೆ: ₹ 160
ಪ್ರ: ಛಂದ ಪುಸ್ತಕ,
ಐ–004, ಮಂತ್ರಿ ಪ್ಯಾರಡೈಸ್,
ಬನ್ನೇರುಘಟ್ಟ ರಸ್ತೆ,
ಬೆಂಗಳೂರು–560 076




ಹೇಳುತ್ತಾನೆ... ಮಾತೇ ಕತ್ತಲು ಕವಿಸುವುದು, ಮಾತೇ ಬೆಳಕು ತೋರುವುದು ಈ ಕಾದಂಬರಿಯ ಕಾಣ್ಕೆ.

ಏನೋ ಬೇಕು, ಏನು ಎಂದು ಗೊತ್ತಿಲ್ಲ; ಏನೋ ಹುಡುಕುತಿದ್ದೇವೆ ಏನು ಎಂದು ಗೊತ್ತಿಲ್ಲ; ಹುಡುಕಾಟಕ್ಕೆ ಏನಾದರೂ ಫಲವಿದೆಯೋ ಗೊತ್ತಿಲ್ಲ. ಗಂಡ ಬಿಟ್ಟು ಹೋದ ಸೀತಮ್ಮನಿಗೆ, ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಯವರಿಗೆ ಮುಂದೇನು ಅನ್ನುವುದೂ ಗೊತ್ತಿಲ್ಲ. ನಾಲ್ಕು ಸಾವಿರ ವರ್ಷಗಳ ಹಿಂದಿನ ಜಲಾಶಯವೋ ಬಂದರೋ, ಮನೆಗಳ ಅಡಿಪಾಯವೋ ಆ ಕಾಲದ ಬದುಕು ನೆಮ್ಮದಿಯದು ಅನ್ನುವ ಭಾವನೆ ಹುಟ್ಟಿಸುತ್ತದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಹಾಗೆ ರೂಪುಗೊಂಡಿರುವ ಇಂದಿನ ವ್ಯವಸ್ಥೆ ಮನುಷ್ಯ ಜೀವಕ್ಕೆ ಬೆಲೆ ಇಲ್ಲದ ಹಾಗೆ ಮಾಡಿದೆ ಅನ್ನಿಸುತ್ತದೆ. ಹಾಗನ್ನಿಸುವುದೂ ಕೇವಲ ಭಾವನೆಯೋ? ನಾಲ್ಕು ಸಾವಿರ ವರ್ಷದ ಹಿಂದೆ ಇದ್ದಿರಬಹುದಾದ ವ್ಯಕ್ತಿಗಳೂ ಬದುಕಿನ ಅರ್ಥವೇನು, ನಮಗೇನು ಬೇಕು ಎಂದು ತಿಳಿಯದೆ ತೊಳಲಿರಲಾರರೇ? ಅಥವಾ ಬದುಕಿ ಉಳಿಯುವುದೇ ಮುಖ್ಯವಾಗಿರುವ ಜನಕ್ಕೆ ಇಂಥ ಭಾವಾರ್ಥಗಳ ಶೋಧನೆ ಮುಖ್ಯವಾಗುವುದಿಲ್ಲವೋ?

ವಿಷಾದದ ಕತ್ತಲಲ್ಲಿ ಮುಂಗಾಣದೆ ಅದ್ದಿಹೋಗುವ ಇಲ್ಲಿನ ಪಾತ್ರಗಳೆಲ್ಲ ಸ್ತ್ರೀಯರದ್ದೇ; ಹಾಗೆಯೇ ಬದುಕಿನ ಕತ್ತಲಲ್ಲೂ ತಮ್ಮಷ್ಟಕ್ಕೇ ಮಿನುಗುವ, ದಾರಿ ತೋರುವ ಪಾತ್ರಗಳೂ ಸ್ತ್ರೀಯರದ್ದೇ ಅನ್ನುವುದೂ ಗಮನಾರ್ಹ. ಕಾದಂಬರಿಯ ಆರಂಭಕಾಲದಲ್ಲಿ ಬಳಕೆಯಾದ ಪತ್ರಲೇಖನದ ತಂತ್ರವನ್ನು ಬಳಸಿಕೊಂಡು ವಿಸ್ತಾರವಾದ ಕಾಲ ದೇಶಗಳ ಕ್ಯಾನ್ವಾಸಿನ ಮೇಲೆ ಮನುಷ್ಯ ನಕ್ಷತ್ರಗಳ ಮಿನುಗನ್ನು ಚಿತ್ರಿಸಿದೆ. ಓದುಗರು ತಮ್ಮೊಳಗನ್ನು ಪರಿಶೀಲಿಸಿಕೊಳ್ಳುವಂತೆ ಮಾಡುವ ನುಡಿಬೆಳಗಿನ ವಾಕ್ಯಗಳೂ ಎದುರಾಗುತ್ತವೆ. ರೈತ ಕುಟುಂಬಗಳನ್ನು ಕುರಿತ ವಿವರಗಳು ಪುನರುಕ್ತವಾದವೇನೋ ಅನ್ನಿಸಿದರೂ, ಅವು ಒಂದೊಂದೂ ವಾಸ್ತವ ಬೇರೆ ಬೇರೆ ಮಗ್ಗುಲನ್ನು ಚಿತ್ರಿಸುತ್ತವೆ. 'ಕನಸು ಚುಕ್ಕೆಗಳನ್ನು ಕೂಡಿಸಿದ ರಂಗೋಲಿಯಂಥ' ಕೃತಿ ಇದು. ವ್ಯಕ್ತಿ ಸಮುದಾಯ, ವರ್ತಮಾನ ಭೂತಕಾಲಗಳ ನೇಯ್ಗೆ ಇಲ್ಲಿದೆ.

❖